## ನಿಮ್ಮೊಡನೆ

# ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕುತ್ತು

ಸೆನ್ಸಾರ್ ಮಂಡಳಿ, ಜ್ಯೂರಿಗಳ ಸಮಿತಿ ಮುಂತಾದ ಕ್ರಮಬದ್ಧ ವಿಧಾನಗಳನ್ನೂ ಬದಿಗೊತ್ತಿ, ಸರ್ಕಾರಿ ಅಧಿಕಾರಿಗಳು ಏಕಪಕ್ಷೀಯವಾಗಿ ಸಿನಿಮಾಗಳ ಬಗ್ಗೆ ತೀರ್ಪು ನೀಡುವುದು ಎಷ್ಟು ಸರಿ? ನಿರ್ದೇಶಕರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ ಒಡ್ಡುವ ಪ್ರವೃತ್ತಿ, ಸಂವಿಧಾನದತ್ತ ಸ್ವಾತಂತ್ರ್ಯದ ಆಶಯಗಳಿಗೂ ಕುತ್ತು ತರುತ್ತಿದೆ.

ಕಲಾವಿದರ ಸೃಜನಶೀಲ ಅಭಿವ್ಯಕ್ತಿಯ ಮಾಧ್ಯಮವಾದ ಸಿನಿಮಾಗಳನ್ನು ಕೆಲವರು ಅಗತ್ಯಕ್ಕಿಂತ ಹೆಚ್ಚು ವೈಯಕ್ತಿಕವಾಗಿ ಪರಿಭಾವಿಸಿ, ಅನಗತ್ಯ ಒತ್ತಡಗಳನ್ನು ಹೇರುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗಿದೆ. ಸಂಜಯ ಲೀಲಾ ಬನ್ಸಾಲಿ ನಿರ್ದೇಶನದ 'ಪದ್ಮಾವತಿ' ಸಿನಿಮಾ ಇದಕ್ಕೆ ಇತ್ತೀಚಿನ ಉದಾಹರಣೆ. ಚಿತ್ತೋರ್‌ಘಡದ ರಾಣಿ ಪದ್ಮಾವತಿ ಮತ್ತು ದೊರೆ ಅಲ್ಲಾವುದ್ದೀನ್ ಖಿಲ್ಜಿ ನಡುವಣ ಪ್ರೇಮ ಪ್ರಕರಣದ ಕಥೆಯಿದೆ ಎಂದು ಈ ಸಿನಿಮಾದ ವಿರುದ್ಧ ಪ್ರತಿಭಟನೆ ನಡೆದು, ಇದೀಗ ಚಿತ್ರದ ಬಿಡುಗಡೆಯೇ ಮುಂದಕ್ಕೆ ಹೋಗಿದೆ. ಮಾತ್ರವಲ್ಲ, ನಿರ್ದೇಶಕ ಬನ್ಸಾಲಿ ಹಾಗೂ ನಟಿ ದೀಪಿಕಾ ಪಡುಕೋಣೆ ಅವರಿಗೆ ಜೀವಬೆದರಿಕೆಯನ್ನೂ ಒಡ್ಡಲಾಗಿದೆ.

ಇತಿಹಾಸದ ಘಟನೆಯೊಂದನ್ನು ಎತ್ತಿಕೊಂಡು ಸಿನಿಮಾದ ಕಥೆ ಹೆಣೆಯುವಾಗ ನಿರ್ದೇಶಕ ಎಷ್ಟು ಸ್ವಾತಂತ್ರ್ಯ ವಹಿಸಬಹುದು; ಆ ಕಥೆಯಲ್ಲಿ ಆತನ ಸೃಜನಶೀಲ ಕಲ್ಪನೆಗಳನ್ನು ಎಷ್ಟರಮಟ್ಟಿಗೆ ಸೇರಿಸಬಹುದು.. ಎನ್ನುವುದು ಚರ್ಚೆಯ ವಿಷಯವೇ. ಆದರೆ ಇತಿಹಾಸವನ್ನು ದಾಖಲೆಯಾಗಿ ಮಂಡಿಸುವುದು ಬೇರೆ; ಒಂದು ಸ್ವತಂತ್ರ ಸಿನಿಮಾ ಆಗಿ ರೂಪಿಸುವುದು ಬೇರೆ. ಸಿನಿಮಾ ಎನ್ನುವುದೇ ಕಾಲ್ಪನಿಕ. ಅದು ಸೃಜನಶೀಲ ನಿರ್ದೇಶಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ. 'ಪದ್ಮಾವತಿ' ಚಿತ್ರ ಇನ್ನೂ ಬಿಡುಗಡೆಯೇ ಆಗಿಲ್ಲ. ಅದಕ್ಕೂ ಮುನ್ನವೇ ಅದರ ಬಗ್ಗೆ ತೀರ್ಪು ಕೊಡುವುದು ಸಂಬಂಧಿಸಿದವರ ಪೂರ್ವಾಗ್ರಹವನ್ನಷ್ಟೇ ಸೂಚಿಸುತ್ತದೆ. ಅದೂ ಅಲ್ಲದೆ, ಯಾವುದೇ ಸಿನಿಮಾದ ಪ್ರದರ್ಶನಕ್ಕೆ ಅನುಮತಿ ನೀಡಲು ನಮ್ಮಲ್ಲಿ ಸೆನ್ಸಾರ್ ಮಂಡಳಿ ಇದೆ. 'ಪದ್ಮಾವತಿ' ಚಿತ್ರ ಸೆನ್ಸಾರ್ ಮಂಡಳಿಯ ಮುಂದೆ ಇನ್ನಷ್ಟೆ ಬರಬೇಕಿದೆ. ಸಿನಿಮಾದಿಂದ ಸಾರ್ವಜನಿಕ ಜೀವನಕ್ಕೆ ತೊಂದರೆ ಇದೆಯೆ, ಆಕ್ಷೇಪಾರ್ಹ ದೃಶ್ಯಗಳಿವೆಯೆ ಎನ್ನುವುದರ ಬಗ್ಗೆ ತೀರ್ಮಾನಿಸಲು ಸೆನ್ಸಾರ್ ಮಂಡಳಿಗೇ ಬಿಟ್ಟುಬಿಡಬೇಕು. ಅದರ ಬದಲಾಗಿ ಬೀದಿಗಿಳಿದು ಪ್ರತಿಭಟನೆ ನಡೆಸಿ, ಸಿನಿಮಾ ಬಿಡುಗಡೆಯಾಗದಂತೆ ಬೆದರಿಕೆ ಒಡ್ಡುವುದು ಪ್ರಜಾಪ್ರಭುತ್ವದ ನಿಯಮಗಳಿಗೂ ವಿರುದ್ಧ; ಪ್ರಜೆಗಳ ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ದುಷ್ಟನಡೆಯೂ ಹೌದು.

ಗೋವಾದ 48ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆ ಮಾಡಿದ ಎರಡು ಸಿನಿಮಾಗಳನ್ನು ಕೊನೆಗಳಿಗೆಯಲ್ಲಿ ಕೈಬಿಟ್ಟಿರುವ ಸರಕಾರದ ನಡೆ ಕೂಡಾ ಖಂಡನೆಗೆ ಅರ್ಹ. ಮಲಯಾಳಂ ಸಿನಿಮಾ 'ಎಸ್.ದುರ್ಗಾ' ಮತ್ತು ಮರಾಠಿ ಚಿತ್ರ 'ನ್ಯೂಡ್' ಇಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಬಲಿಯಾದ ಚಿತ್ರಗಳು. ಚಿತ್ರೋತ್ಸವದ ಜ್ಯೂರಿಗಳ ತೀರ್ಮಾನದ ವಿರುದ್ಧ ಸರ್ಕಾರವೇ ಈ ರೀತಿಯ ಕ್ರಮ ಕೈಗೊಳ್ಳುವುದಾದರೆ, ಜ್ಯೂರಿಗಳ ನೇಮಕದ ಅಗತ್ಯವಾದರೂ ಏನು?

ಸೆನ್ಸಾರ್ ಮಂಡಳಿಯ ಸೂಚನೆಯ ಬಳಿಕ 'ಸೆಕ್ಸೀ ದುರ್ಗಾ' ಎನ್ನುವ ಟೈಟಲ್‌ಅನ್ನು ನಿರ್ದೇಶಕರು 'ಎಸ್.ದುರ್ಗಾ' ಎಂದು ಬದಲಾಯಿಸಿದ್ದರು. ಒಂದೆರಡು ಕಡೆ ಡೈಲಾಗ್‌ಗಳನ್ನು ಮ್ಯೂಟ್ ಮಾಡುವುದು ಬಿಟ್ಟರೆ, ಸನಲ್ ಕುಮಾರ್ ಸಸಿಧರನ್ ನಿರ್ದೇಶನದ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ ಯಾವ ತಕರಾರೂ ಇರಲಿಲ್ಲ. 'ನ್ಯೂಡ್' ನಿರ್ದೇಶಕ ರವಿ ಜಾಧವ್ ಕೂಡಾ ಕೆಲವು ಅತ್ಯುತ್ತಮ ಸಿನಿಮಾಗಳನ್ನು ನೀಡಿದವರು. ಎರಡೂ ಸಿನಿಮಾಗಳು ಸ್ತ್ರೀ ಕೇಂದ್ರಿತ ಚಿತ್ರಕಥೆಯನ್ನು ಹೊಂದಿವೆ. ಈ ಸಿನಿಮಾಗಳನ್ನು ಚಿತ್ರೋತ್ಸವದ ಪಟ್ಟಿಯಿಂದ ಕಿತ್ತು ಹಾಕಲು, ಹೆಣ್ಣುಮಕ್ಕಳ ಬಗ್ಗೆ ಸರ್ಕಾರಕ್ಕೆ ಪೂರ್ವಾಗ್ರಹಪೀಡಿತ ಧೋರಣೆ ಇರುವುದೇ ಕಾರಣವಾಗಿರಬಹುದೆ?

70ರ ದಶಕದಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿದ್ದಾಗ 'ಕಿಸ್ಸಾ ಕುರ್ಸೀ ಕಾ' ಎನ್ನುವ ಸಿನಿಮಾವನ್ನು ನಿಷೇಧಿಸಿದ್ದು; ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಕಿಶೋರ್ ಕುಮಾರ್ ಅವರ ಹಾಡುಗಳನ್ನು ನಿಷೇಧಿಸಿದ್ದು ಈಗ ನೆನಪಾಗುತ್ತಿದೆ. ಕಾಲ ಮತ್ತು ಆಳುವವರು ಬದಲಾದರೂ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಆಳುವ ವರ್ಗದ ಅಸಹನೆಯ ಧೋರಣೆ ಬದಲಾಗಿಲ್ಲ ಎನ್ನುವುದು ಮತ್ತೆ ಸಾಬೀತಾಗಿದೆ. ನಿರ್ದೇಶಕರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ ಒಡ್ಡುವ ಇಂತಹ ಪ್ರವೃತ್ತಿ, ಸಂವಿಧಾನದತ್ತ ಸ್ವಾತಂತ್ರ್ಯದ ಆಶಯಗಳಿಗೂ ಕುತ್ತು ತರುತ್ತಿದೆ.

■ ಬಿ.ಎಂ. ಹನೀಫ್

